ದರುಮ್ರ್ರಾಯ ತನ್ನ ತಮ್ಮ ಸಂಬಾವಿತಂತ ತಿಳ್ದು ಸುಮ್ಮಕಿರ್ತತಿ. ಆದ್ರ ಅವನವ್ವ ಸುಲೋಚನಕ್ಕ, ಸೊಸೆದೂ ಮೈದ್ನಂದು ಸಲಿಗಿ ಭಾಳಾತಂತ ಅನುಮಾನ್ಸಿ ಒಂದಿಸ ಸ್ಯಾಂಬವಿಗೆ ಬೈತಳ ಆದ್ರ, ಈ ಸ್ಯಾಂಬವಿ ಎಂತಕಿ ಅಂತಿ? ಅತ್ತಿಗೇ ಇಸ ಇಕ್ಕಿ ಕೊಂದ್ಬುಡದೇ?

ದ್ಯಾಮವ್ವ, ಈ ನಾಗರತ್ನವಂದೂ ಅದೇ ಕತಿಯಲೇ ಹುಡ್ಗಿ! ಈಕಿ ಸೊಸಿ ಆ ಸ್ಯಾಂಬವ್ವಕ್ಕನ ತಿಸಿಮಿಂಡಿ ಅಂತ ಶುರು ಮಾಡಿದ್ದ ಸಿದ್ದವ್ವ, ತಾನು ಅನ್ಯರಿಂದ ಕೇಳಿದ್ದನ್ನೆಲ್ಲಾ ಕೂಡಿಸಿ ಹೇಳಿದಳು. ಆಕೆಗೆ ಸಂಕವ್ವಳೂ, ತನ್ನ ನಾಟಕದ ಕತೆಯನ್ನು ಅರ್ಧಕ್ಕೇ ನಿಲ್ಲಿಸಿಕೊಂಡ ದ್ಯಾಮವ್ವಳೂ, ಸಾತು ಕೊಟ್ಟರು. ಅವರೆಲ್ಲಾ ಒಟ್ಟಾಗಿ ಹೇಳಿದ ನಾಗರತ್ನವ್ವಳ ಮನೆಯ ದುರಂತ ಕಥಾಸಾರ ಹೀಗಿತ್ತು:

ಎಂದೂ ಮೇಳೀ ಮುಟ್ಟದೇ, ಕುರಿ ಕಾಯ್ತಾ ಬೆಳೆದ ನೀಲಗಾರ ವಂಶದ ಕಿರಿಮಗ ಪಕ್ಕೀರನ ಕೈ ಹಿಡಿದ ನಾಗರತ್ನವ್ವ ಮಕ್ಕಳು ಕೈಗೆ ಬರೋತನಕ ಕಚ್ಚೆ ಕಟ್ಟಿಕೊಂಡು ಗಳೇವು ಹೊಡೆದು  ಗಂಡೆಂಗಸು ಎನ್ನಿಸಿಕೊಂಡೋಳು. ಆದರೆ, ನತಾದೃಷ್ಟಕ್ಕೆ ಹಿರೀಮಗ ಬೀರಗೆ ಅಪ್ಪನ ಟೀಬೀ ರೋಗ ಗಂಟು ಬಿತ್ತು. ಆದರೂ, ಅವಸರಕ್ಕೆ ಬಿದ್ದು ಅವನಿಗೆ ಮದುವೆ ಮಾಡಿದಳು. ಹತ್ತೆಕರೆ ಹೊಲ, ಐನೂರು ಕುರಿ, ಹನ್ನೆರಡಂಕಣದ ಮನೆ, ದುಡ್ಡು ಬಂಗಾರಾದಿ ಹಳೇ ಹೆಪ್ಪೈತಿ ಅಂತ ಬೀರನಿಗಿದ್ದ ಟೀಬಿ ನಿರ್ಲಕ್ಷಿಸಿ ಸುಶೀಲೆಯ ತವರಿನವರು ಅವಳ ಒಲ್ಲೆ ಎಂಬೋ ಗೋಗರೆತ ಲೆಕ್ಕಿಸದೇ ಮದುವೆ ಮಾಡಿದರು. ಆದರೆ  ನಾಟಕದ ಖಳನಾಯಕಿ ಶಾಂಭವಿಯಂತೆಯೇ ಈಕೆಯೂ, ಮೊದಲ ರಾತ್ರಿಯೇ ರಮಿಸಲು ಹೋದ ಗಂಡನ ಮೈ ಕೈ ಜಿಬಿರಿ, ಚೀರಾಡಿ, ಕೇರೀ ಜನರೆಲ್ಲಾ ಎದ್ದು ಬಂದು ಏನೇನು ಅಂತ ಅಂಗಳದಿ  ನೆರೆವಂತೆ ಮಾಡಿದ್ದಳು. ಆನಂತರ, ನೀಲ ಗಾರ ದಂಪತಿಗಳು ಬೀಗರನ್ನೂ ತಮ್ಮ ಬಳಗವನ್ನೂ ಕೂಡಿಸಿ, ಪಂಚಾಯಿತಿ ಮಾಡಿ, ಮಗ ಸೊಸೆಯರನ್ನು ಮರು ಹೊಂದಾಣಿಕೆ ಮಾಡಿಸಿದರು. ಮಾಳವ್ವ, ಮಗಳು ಸುಶೀಲೆಗೆ ಬುದ್ಧಿ ಹೇಳಿ ಸಮಾಧಾನಗೊಂಡರೆ, ಬದಲಾಗಲೊಲ್ಲದ ಸುಶೀಲೆ ಕೃತಕವಾಗಿ ಅತ್ತೆಗೆ  ಮಣಿದವಳಂತೆ ನಟಿಸಹತ್ತಿದಳು. ಕೊನೆಗೂ ಸೊಸೆ ತನ್ನಂಕೆಗೆ ಬಂದಳೆಂದು ತಿಳಿದ ನಾಗರತ್ನವ್ವ, ದುಡ್ಡು ಬಂಗಾರದ ಬೆನ್ನುಬಿದ್ದು, ತನ್ನ ಕುಟುಂಬದೊಳ ವಿದ್ಯಾಮಾನಗಳನ್ನು ಲಕ್ಷಿಸದಾದಳು.

ಲಾ ಬೀರ, ನೀನು ಕುರಿ ಕಾಯಿ.ತಮ್ಮ ಕನಕ ಬ್ಯಾಸಯ ಮಾಡ್ಲಿ, ಸಣ್ಣನು ನಾಗ ಅದೇನು ಓದ್ತನೋ ಓದ್ಲಿ ಅಂತ ಹುಕುಂ ಹೊರಡಿಸಿದ ಆಕೆ  ಸೊಸೆ ತಲೆಗೆ ಬುತ್ತಿ ಗಂಟಿಟ್ಟು, ಎಲೆಡಿಕೆ ಚೀಲ ಸೊಂಟಕ್ಕಿಟ್ಟುಕೊಂಡು, ಹಿಂದೆ ಕೈ ಬೀಸುತ್ತಾ ನಿತ್ಯ ಹೊಲಕ್ಕೆ ಹೋದಳು. ಪತಿ ಪಕ್ಕೀರಗೆ ಊರ ಹೊರಗಿನ ರಪ್ಪದಲ್ಲಿ ಬಿದ್ದಿರಲು ನಿಯಮಿಸಿದಳು. ಅವನಾದರೋ, ಎಲೆ ತಂಬಾಕು ಸುಣ್ಣ ತಿಕ್ಕುತ್ತಾ, ಕರ ಮರಿ ನೋಡಿಕೊಳ್ಳುತ್ತಾ, ಕುರಿಪಿಚಗಿ ಗೂಡಿಸುತ್ತಾ, ಮರಿಗಳಿಗೆ ಹಾಕಿದ ಜಾಲಿ ಕಳ್ಳೀ ಎತ್ತಿ ಹಾಕುತ್ತಾ ಬಿದ್ದೋನು ಯಾವಾಗಲೋ ಹಬ್ಬ ಹುಣ್ಣಿಮೆಯಲ್ಲಷ್ಟೇ ಮನೆಗೆ ಎಡತಾಕುವಂತಾದ!

ಇನ್ನು ಹೈಸ್ಕೂಲಲ್ಲಿ ಎಸ್ಸೆಲ್ಸಿ ಓದೋ ದುಂಡನೇ ಮೈಕಟ್ಟಿನ ನಾಗಗೆ, ಕ್ರಾಫ್ಟ್ ಟೀಚರ್ ಶುಕ್ಲಾಚಾರಿ ಭೀಮ ಅಶ್ವತ್ಥಾಮನಂತಹ ಪೌರಾಣಿಕ ಪಾತ್ರಗಳ ಏಕಾಭಿನಯದ ರುಚಿ ತೋರಿಸಿರುವರಾದ್ದರಿಂದ ನಾಗ, ಪಾಠಕ್ಕಿಂತ ಪಠ್ಯೇತರ ವಿಷಯಗಳಲ್ಲಿ ಹೆಚ್ಚು ಆಸಕ್ತನಾಗಿ, ಕನ್ನಡಿಯ ಮುಂದೆ ನಿಂತು ಮೈ ಕೈ ತಿರುವೋದು, ಎಲೆಲವೋ ಸುಯೋಧನ, ಏಳು ಮಳ ಉದ್ದವಿರುವೆನೆಂಬ ಗರ್ವದಿಂದ ಹೀಗೆ ಮಾತನಾಡುತ್ತಿರುವೆಯಾ? ನಿನ್ನನ್ನು ಈ ಗದೆಯಿಂದ ತಿಕ್ಕಿ ತೇದಿ ನಾದಿ ಬಿಡುವೆನು! ಉ ಕ ಕ ಕ ಕಾ ಓ ಅಗಸ್ತ್ಯ ನಕ್ಷತ್ರ! ಕಡಲ ಕುಡಿದಿಟ್ಟ ದಿವ್ಯಾತ್ಮನು ನೀನು! ಎಂಬಿತ್ಯಾದಿ ಡೈಲಾಗು ಹೊಡೆದು ಗಹ ಗಹಿಸಿ ನಕ್ಕು ಮನೆ ಮಂದೀನ್ನೆಲ್ಲಾ ರಂಜಿಸುವನಲ್ಲದೇ, ತಾನೂ ಭೀಮನಂತಾಗಬೇಕೇಂಬೋ ಹುಚ್ಚಿನಲ್ಲಿ ಚೆಂಬುಗಟ್ಟಲೇ ಹಾಲು ಕುಡಿಯೋದು, ಕುಡಿಕೆ ಕುಡಿಕೆ ಕೆನೆ ಮೊಸರನ್ನು ಗಂಗಳ ನವಣಕ್ಕಿ ಕಿಚಡಿಗೆ ಕಲಸಿ ಬಕಾಸುರನಂತೆ ಮೆತ್ತೋದು ಮಾಡುವನಲ್ಲದೇ, ಒಲೆ ಮೇಲಿನ ಹಾಲಿನ ಪಾತ್ರೆಯೊಳಗಿನ ಕೆನೆಯನ್ನೆಲ್ಲಾ ಕದ್ದು ತಿನ್ನುವನು. ಇವನ ಮೇಲಿನ ಅತೀವ ಮಮಕಾರದಿಂದ ಅವ್ವ ಕೇಜಿ ಕೇಜಿ ಒಣ ಕೊಬ್ಬರಿ ಉತ್ತತ್ತಿ ಕುಟ್ಟಿ ತಿನ್ನಿಸುವಳಲ್ಲದೇ, ಹದವಾದ ಕುರಿ ಕೋಳಿ ಮಾಂಸ, ಕೋಳಿ ತತ್ತಿ ಬೇಯಿಸಿಟ್ಟು ತಿನ್ನಿಸಿ ಒಳಗೇ ಖುಷಿ ಪಡುವಳು. ಹದಿನಾರನೇ ವಯಸ್ಸಿಗೇ ಮೈಯೊಡೆದು ಕುಡಿ ಮೀಸೆ ಕುಣಿಸುತ್ತಿರುವ ನಾಗನನ್ನು ನೋಡಿದೋರು, ಇವನು ಟೀಬೀ ರೋಗಿಷ್ಠ ಪಕ್ಕೀರನ ಮಗನೇ ಎಂದು ಹುಬ್ಬಾರಿಸುವರು. ನಾಗನ ಕಳ್ಳಾಟವನ್ನೆಲ್ಲಾ ಬಲ್ಲ ಸುಶೀಲೆಗೆ ಅವನೆಂದರೆ ಎಲ್ಲಿಲ್ಲದ ಪ್ರೀತಿ. ತನ್ನ ಗಂಡನಲ್ಲಿಲ್ಲದ ಅಂಗ ಸೌಷ್ಠವತೆಯನ್ನು ಈ ಕಿರಿ ಮೈದುನ ನಾಗನಲ್ಲೂ, ಎರಡನೆಯ ಮೈದುನ ಕನಕನಲ್ಲೂ ಕಂಡು ಖುಷಿ ಪಡುವಳು. ಕೆಲಸದ ನೆವದಲ್ಲಿ ಅಡಿಗೆ ಮನೆ, ಬಚ್ಚಲು, ಪಡಸಾಲೆ, ಹಿತ್ತಲು ಹೀಗೆ ಮನೆಯಲ್ಲೆಲ್ಲಾ ಪಾತ್ರೆ ಪಡಗ ಹಿಡಿದುಕೊಂಡು ಎದೆಯುಬ್ಬಿಸಿ ಅಡ್ಡಾಡುತ್ತಲೇ ಮೈದುನರ ಕಡೆ ಹುಸಿನಗೆ ಬೀರಿ, ಬೆವರಮಣಿಗಟ್ಟಿದ ಕೆಮ್ಮೊಗ ತೋರಿ, ಆಮೋದಗೊಳ್ಳುವಳು. ಹೀಗಿರುವಾಗ, ಮನೆಯೊಳಗಿನ ಅಂತರಂಗದ ಸತ್ಯ ಯಾರ ಅರಿವಿಗೂ ಬಾರದು.

ಬೇಸಾಯಕ್ಕೆಂದು ಹೊಲಕ್ಕೆ ಹೋದ ಕನಕಗೆ ಅತ್ತಿಗೆ ಬುತ್ತಿ ತರುತ್ತಾಳೆಂದರೆ ಇನ್ನಿಲ್ಲದ ಉಮೇದು. ಕನಕಗೆ ಬುತ್ತಿ ಹೊಯ್ಯೋದೆಂದರೆ ಆಕೆಗೂ ಇನ್ನಿಲ್ಲದ ಉತ್ಸಾಹ. ಹೊಲದಲ್ಲಿ ಅತ್ತೆ ಹುಲ್ಲು ಕಸ ಕಡ್ಡಿ ಮ್ಯಾರೆ ಅರುಗುಸರಗು ಅಂತ ಅಡ್ಡಾಡುತ್ತಿದ್ದರೆ ಸುಶೀಲೆ ಯಾವಾಗಲೂ ಕನಕನ ಹಿಂದೆಯೇ ಬೆನ್ನು ಬಿದ್ದಿರುವಳು. ಮಬ್ಬುಗತ್ತಲಾದರೂ ಅತ್ತಿಗೆ ಮೈದುನರು ಹೊಲ ಬಿಟ್ಟು ಕಡೆಗೇ ಬರಲಾರರು. ಎಲ್ಲೋ ತೊಗರಿ ಅಕ್ಕಡಿ ಮಧ್ಯೆ ಜೋಳದ ನಡುವೆ ಇಬ್ಬರೇ ಕೊಕಾಡಿಸಿ ನಗೋದನ್ನು ಕೇಳಿದೋರು ದಾರೀ ತುಂಬಾ ಏನೋ ಗುನುಗುಟ್ಟುತ್ತಾ ಹೋಗುವರು! ಆದರೂ, ತಕ್ಷಣ ನೋಡಿದವ ರಂತೂ ಅತ್ತಿಗೆಮೈದುನ ಸಂಬಂಧಕ್ಕೆ ಕನಕಸುಶೀಲೆಯರೇ ಆದರ್ಶಪ್ರಾಯರೆನ್ನುವರು. ಅತ್ತಿಗಿ ಮೈದುನುಂದದೇನು ಸರಸ ಸಲ್ಲಾಪ. ನಾನ್ಯಾ ಸಿಲುಮ ದಾರಾವಾಯಾಗೂ ನೋಡಿಲ್ಲಲೇ ಸಿದ್ದವ್ವ ಅಂತ ದ್ಯಾಮವ್ವ ನೆನಪಿಸಿಕೊಂಡಳು.

ಸುಶೀಲೆಯ ಚೊಚ್ಚಲ ಬಸಿರಿಂದ ಸ್ವತಃ ಬೀರನೇ ಚಕಿತಗೊಂಡಿದ್ದನಾದರೂ ಗಂಡನಾದ ತಾನೇ ತನ್ನ ಹೆಂಡತಿಯ ಬಸಿರನ್ನು ಹೇಗೆ ಅನುಮಾನಿಸುವುದು? ಬಹಿರಂಗ ತಾಳಿ ಕಟ್ಟಿದ ಭೂಪ ಪತ್ನಿಯನ್ನು ಸೇರಿದ್ದೇ ಕಮ್ಮಿ. ಲಗ್ನವಾದ ಹೊಸದರಲ್ಲಿ ಸೊಂಟ ಮೈಕೈ ನೋವು ಅಂತ ಸುಶೀಲೆ ಬೀರನ ಹೊಸ ಉಮೇದಿಗೇ ತಣ್ಣೀರೆರೆದಿದ್ದಳು. ಬಾರ್ಲೇ ಬಿಡಾಡಿ ಅಂತ ಹಾಸಿಗೀಲಿ ತನ್ನ ಮಗ್ಗಲಿಗೆ ಎಳಕೊಳ್ಳೋಕೆ ಬೀರ ಹರಸಾಹಸ ಮಾಡಿಯೂ ಗೆದ್ದ ಪ್ರಸಂಗ ಕಮ್ಮಿಯೇ. ಎರಡು ಉಮ್ಮಚುಮ್ಮ ಅಷ್ಟೇ, ಗಂಡನ್ನ ದೂರಿಡೋ ಹುನ್ನಾರದಲ್ಲಿ, ಅದ್ಯಾದೋ ತನಿಗ್ಗೊತ್ತಿರೋ ಡಾಕ್ಟರ ಹತ್ರ ಅವನನ್ನು ಕರ್ಕೊಂಡು ಹೋಗಿ, ಹಾಸ್ಗೀ ಪತ್ಯ ಹೇಳಿಸಿದಾಗ ಹುಣಸೆ ಹಣ್ಣು ತಿಂದ ಮಂಗನಾಗಿದ್ದ ಬೀರ. ಈ ಕುಟಿಲಗಾತಿ, ಗಂಡನನ್ನು ಹೊರಗಟ್ಟಿ ಡಾಕ್ಟರ ಬಳಿ ಒಬ್ಬಳೇ ನಾಟಕದ ಸೂಳೆಯಂತೆ ಗೋಣು ತಿರುವುತ್ತಾ, ಕೆಮ್ಮೊಗದಿಂದ ಕಾಮ ಚಿಮ್ಮಿಸುತ್ತಾ ಅದೇನು ಭಾಷಣ ಬಿಗಿದಳೋ ಅರ್ಧ ತಾಸು ಬಿಟ್ಟು ಹೊರ ಬಂದಳು. ನಿದ್ರಿಸಲಾಗದೇ ಅಷ್ಟೊತ್ತೇನು ಮಾಡಿದೆ ಅಂದದ್ದಕ್ಕೆ, ನಂದೇನ ಒಂದ ಸಮಸ್ಯೆ, ಯ್ಯೋಳಿಕೆಂದೆ. ಅದೆಲ್ಲ ಗಂಡೂಸ್ರಿಗೇಳದಲ್ಲ ಎಂದು ಬಾಯಿ ಮುಚ್ಚಿಸಿದಳು. ಡಾಕ್ಟರಾದರೋ ಬೀರನಿಗೆ, ಹೆಂಡತೀಲಿಂದ ದೂರಿದ್ದೇ ನಾಕ್ಕಾಲ ಬಾಳ್ತಿ, ಇಲ್ಲದ್ರ....ಗೊಟಕ್ ಎಂದು ಹೆದರಿಸಿರುವರು. ಹೀಗಿರುವಾಗ, ಒಂದಾಳಿನ ಜತೆಗೆ ಅಡವೀಲಿ ಕುರಿ ಆಡಿಸಿಕೊಂಡು ಬಂದು, ಶಿವನೇ ಸಾಕಪ್ಪಾ ಅಂತ ವರಸಿಗೆ ಅಡ್ಡಬೀಳೋದು ಅವನ ನಿತ್ಯ ಕೆಲಸವಾಗಿರಲು, ಹೆಂಡತಿ ಬಸಿರಾಗಿರುವಳೆಂದರೆ ನಂಬೋದು ಹೇಗೆ? ಲೇ ಮುಟ್ಟೆಂಗ ನಿಲ್ತು? ಅಂತ ಒಂದಿಷ್ಟು ಧೈರ್ಯ ಮಾಡಿ ಒಂದು ರಾತ್ರಿ ಕೆಮ್ಮುತ್ತಲೇ ಕೇಳಿದರೆ, ಅವತ್ತು ಸೀಸ ಕುಡ್ದು ಮಟನ್ ತಿಂದು ಎಡಕಲ್ಲು ಗುಡ್ಡದ ಮ್ಯಾಲೆ ಹತ್ತಿಸಿದ್ಯಲ್ಲ, ಮರ್ತ್ಯ? ಅಂತ ಬೀರಗೇ ಗೊತ್ತಿಲದ ನಿಧುವನದ ಕತೆ ಹೇಳಿದಲಾದರೂ, ಅವನಿಗೆ ಹೆಂಡತಿ ಮೇಲಿನ ಅನುಮಾನ ತೊಲಗಲಿಲ್ಲ ಕುರಿಗೆಣೆಕಾರ ವಡ್ಡರ ಬಸಪ್ಪ, ಬೀರಪ್ಪನ ಗೊರಕೆ ನೋಡಿ ತ್ವಾಳಪ್ಪ ಕುರಿ ಹೊತ್ತನಂತೆ ಅಂತಂದು ಇವನ ತಲೆಗೆ ಬಿಟ್ಟ ಹುಳ ಕೊರೀತಿತ್ತು. ಆವತ್ತಿನಿಂದಲೇ ಬೀರ ತನ್ನ ಚೆಲ್ಲಗಾರ್ತಿ ಹೆಂಡತೀ ಮೇಲೆ ಒಳಗೇ ಉಮ್ಮಚ್ಚರಗೊಂಡ! ಅವಳ ಅನುಮಾನಾಸ್ಪದ ನಡಾವಳಿಕೆ ಅವನನ್ನು ನಿಂತಲ್ಲಿ ಕುಂತಲ್ಲಿ ಕಾಡಹತ್ತಿದವು.

ದಿನಾ ಚೆಂಜೆಲೆ ಚೆಂಬು ತಗಂಡು ಒಬ್ಬಾಕೆ ತಾಸುಗಟ್ಟಲೆ ಹೊಕ್ಕಳ ಎಲ್ಲಿಗೆ ಹೊಕ್ಕಳ? ಈಕಿ ಯಾವನಿಗೋ ಗಂಟು ಬಿದ್ದಳ ಅಂತ ಅನುಮಾನಿಸಿದ ಬೀರ ಒಂದು ಸಂಜೆ ಅವಳನ್ನು ಹಿಂಬಾಲಿಸಿದ. ಆಕೆ ತಮ್ಮದೇ ಊರ ಮುಂದಿನ ಹೊಲಕ್ಕೆ ಹೋದಳು. ಆದರೆ ಅಲ್ಲಿ ಯಾವ ಅನ್ಯ ಗಂಡಸಿನ ಸುಳಿವೂ ಕಾಣಲಿಲ್ಲ. ಹೊಲದ ಮಧ್ಯೆ ಇದ್ದ ಒಬ್ಬ ಗಂಡಸು ಬೀರನ ತಮ್ಮ ಕನಕ. ಅಣ್ಣ ಬೀರಪ್ಪನ ಅನಿರೀಕ್ಷಿತ ಬರುವಿನಿಂದ ಸ್ವಲ್ಪ ಕನಲಿದವನಂತೆ ಕಂಡ ಕನಕ ಯಣ, ಇಟತ್ತಿನ್ಯಗ್ಯಾಕ ಬರಕೋದೆ? ಅಂದದ್ದಕ್ಕೆ, ಸುಮ್ಮಕ ಬ್ಯಾಸ್ರಾತು ಬಂದೆ ಎಂದಷ್ಟೆ ಉತ್ತರ ಹೇಳಿ, ತನ್ನ ಕಣ್ಣನ್ನೆಲ್ಲಾ ತನ್ನ ಹೆಂಡತಿ ಸುಶೀಲೆ ತೆಂಬಿಗೆ ಕೂತಿದ್ದ ದೂರದ ತಗ್ಗೊಂದರ ಕಡೆ ಇಟ್ಟುಕೊಂಡು, ತಮ್ಮನಿಂದ ದೂರ ನಡೆದು ಹೋದ. ಸುಶೀಲೆ ತಗ್ಗಿನಿಂದ